ಕವಿತೆ. ಆದ್ದರಿಂದಲೇ ಅದು 'ಭಾವೈಕ್ಯ ಗೀತೆ' ಪ್ರಶಸ್ತಿಗೆ ಅರ್ಹವಾಯಿತು.

ಕುವೆಂಪು, ಬೇಂದ್ರೆ, ಮಾಸ್ತಿ, ಡಿವಿಜಿ, ಪುತಿನ, ಕೆಎಸ್‌ನ, ಜಿ.ಸೀ., ರಾಜರತ್ನಂ ಪರಂಪರೆಯಲ್ಲಿ ಸಾಗಿ ಬಂದವನು ನಾನು. ವಚನಕಾರರು, ಕೀರ್ತನಕಾರರು, ಸರ್ವಜ್ಞ, ಶಿಶುನಾಳ ಶರೀಫರ ನನ್ನ ಓದು ಇಂದಿಗೂ ನನಗೆ 'ಅಭಿರುಚಿ' ಕಲಿಸಿದೆ. ಅತ್ಯುತ್ತಮ 'ಕಾವ್ಯ'ವನ್ನು ಸಿನಿಮಾಗಳಲ್ಲೂ ಬರೆಯಲು ಸಾಧ್ಯವಾಗಿದೆ.

ಅಯಾಚಿತವಾಗಿ ಕವಿಯ ಅಂತರಂಗದಾಳದಿಂದ ಹೂ ಅರಳುವಂತೆ, ರವಿ ಮೂಡುವಂತೆ, ಗಾಳಿ ಬೀಸುವಂತೆ, ನದಿ ಹರಿಯುವಂತೆ, ಮೋಡ ತೇಲುವಂತೆ, ಮಳೆ ಹನಿಯುವಂತೆ ಉಕ್ಕುಕ್ಕಿ ಬರುವುದು ಸಹಜ ಕವಿತೆ.

ಆಲೋಚಿಸಿ, ಸನ್ನಿವೇಶದಲ್ಲಿ ತಾನೇ ಆ ಪಾತ್ರವೆಂದು ಪರಿಭಾವಿಸಿ, ಕಲ್ಪನೆಗೆ ಹೋಗಿ, ಇತ್ಯಾತ್ಮಕವಾಗಿ ಗೀತೆ ರಚಿಸುವ ಗೀತರಚನಕಾರನಿಗೂ (ವಾಸ್ತವವಾಗಿ ಸಾಂಸ್ಕೃತಿಕ ರೂವಾರಿ) ಹೊಣೆಗಾರಿಕೆ ಇರುತ್ತದೆ.

ಹಿಂದಿನ ಗೀತರಚನಕಾರರಾದ ಬೆಳ್ಳಾವಿನ ನರಹರಿ ಶಾಸ್ತ್ರಿಗಳು, ಜಿ.ವಿ. ಅಯ್ಯರ್, ದೇವುಡು ನರಸಿಂಹಶಾಸ್ತ್ರಿ, ಕು.ರಾ. ಸೀತಾರಾಮಶಾಸ್ತ್ರಿ, ಹುಣಸೂರು ಕೃಷ್ಣಮೂರ್ತಿ, ಎಚ್.ಎಲ್.ಎನ್. ಸಿಂಹ, ಆರ್.ಎನ್.ಆರ್., ಚಿ. ಸದಾಶಿವಯ್ಯ, ಎಸ್.ಕೆ. ಕರೀಂಖಾನ್, ಸೊರಟ್ ಅಶ್ವತ್ಥ್, ಚಿ. ಉದಯಶಂಕರ್, ವಿಜಯನಾರಸಿಂಹ, ಆರ್.ಎನ್. ಜಯಗೋಪಾಲ್, ಕಣಗಾಲ್ ಪ್ರಭಾಕರ್ ಶಾಸ್ತ್ರಿ ಇವರೂ ಸಹ ಕಾವ್ಯಾತ್ಮಕ ಗೀತೆಗಳನ್ನು ಬರೆದಿದ್ದಾರೆ. ಸುಲಭವಾಗಿ ಅವರನ್ನೆಲ್ಲಾ ಇಂದಿನ ವಿಮರ್ಶಕರು ದೂರ ಇಟ್ಟು ಬರೆಯುವುದು ಸರಿಯಲ್ಲ.

ಈ ಹೊತ್ತು ಹಂಸಲೇಖ, ವಿ. ಮನೋಹರ್, ಕಲ್ಯಾಣ್, ಜಯಂತ ಕಾಯ್ಕಿಣಿ ಒಳ್ಳೆ ಹಾಡುಗಳನ್ನು ಬರೆದಿದ್ದಾರೆ. ಅವುಗಳು ಕವಿತೆಗಳೂ ಆಗಿವೆ. 'ದೃಷ್ಟಿಯಂತೆ ಸೃಷ್ಟಿ' ನೋಡುವ ಕಣ್ಣು ಬೇಕು. ಅರಿಯುವ ಹೃದಯಬೇಕು. ಮೆಚ್ಚುವ ಮನಸ್ಸು ಬೇಕು. ಒಟ್ಟಾರೆ ಸಿನಿಮಾ ಗೀತರಚನಕಾರರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ಒಳಿತನ್ನು ಸ್ವಾಗತಿಸುವ ಜನಮನ ಬೇಕು.

## ದೊಡ್ಡರಂಗೇಗೌಡ

ಜನಪ್ರಿಯ ಗೀತರಚನಕಾರ, ಕವಿ ದೊಡ್ಡರಂಗೇಗೌಡರು ತುಮಕೂರು ಜಿಲ್ಲೆಯ ಕುರುಬರ ಹಳ್ಳಿಯವರು. ಕನ್ನಡ ಅಧ್ಯಾಪಕರಾಗಿದ್ದ ಅವರು ಪ್ರಸ್ತುತ ನಿವೃತ್ತರು. 'ಪಡುವಾರಳ್ಳಿ ಪಾಂಡವರು', 'ರಂಗನಾಯಕಿ', 'ಬಂಗಾರದ ಜಿಂಕೆ', 'ಪರಸಂಗದ ಗೆಂಡೆತಿಮ್ಮ', 'ಆಲೆಮನೆ', 'ಅರುಣರಾಗ', 'ಮುದುಡಿದ ತಾವರೆ ಅರಳಿತು', 'ಏಳು ಸುತ್ತಿನ ಕೋಟೆ', 'ಅಶ್ವಮೇಧ', 'ಜನುಮದ ಜೋಡಿ' ಅವರು ಗೀತೆಗಳನ್ನು ಬರೆದ ಕೆಲವು ಜನಪ್ರಿಯ ಸಿನಿಮಾಗಳಾಗಿವೆ. ಅವರು ಬರೆದಿರುವ ಗೀತೆಗಳ ಸಂಖ್ಯೆ 500ನ್ನು ದಾಟುತ್ತದೆ. ಕನ್ನಡ ಸಿನಿಮಾ ಗೀತೆಗಳಿಗೆ ಜನಪದ ಮತ್ತು ಆಡುಮಾತಿನ ಸ್ಪರ್ಶ ಕೊಟ್ಟವರು ದೊಡ್ಡರಂಗೇಗೌಡರು.

'ಪ್ರೀತಿ ಪ್ರಗಾಥ', 'ಜಗಲಿ ಹತ್ತಿ ಇಳಿದು', 'ಕಣ್ಣು ನಾಲಿಗೆ ಕಡಲು', 'ನಾಡಾಡಿ', 'ಮೌನ ಸ್ಪಂದನ', 'ಏಳು ಬೀಳಿನ ಹಾದಿ', 'ಚದುರಂಗದ ಕುದುರೆಗಳು', 'ಹೊಸ ಹೊನಲು', 'ಲೋಕಾಯಣ', 'ನಿಕ್ಷೇಪ', 'ಗೆಯ್ಮೆ' ಮುಂತಾದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಗೌಡರು ಪ್ರವಾಸ ಕಥನ ಹಾಗೂ ಭಕ್ತಿಗೀತೆಗಳನ್ನೂ ಬರೆದಿದ್ದಾರೆ. ಅವರ ಭಾವಗೀತೆಗಳ ಕ್ಯಾಸೆಟ್ ಮತ್ತು ಸೀಡಿಗಳು ಹೊರಬಂದಿವೆ.